ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2014–15 : ದಿನಾಂಕ: 8–12–2014

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | 7ನೇ ಬೆಂಗಳೂರು ಅಂತರಾಷ್ಟ್ರೀಯ ಸಿನಿಮೋತ್ಸವದಲ್ಲಿ ಪ್ರದರ್ಶನ ಕಂಡ ಕನ್ನಡ ಚಿತ್ರಗಳ ನಿರ್ದೇಶಕರಾದ ಶ್ರೀ ಕೃಷ್ಣ (ಗಜಕೇಸರಿ) ನಿಖಿಲ್ ಮಂಜು (ಹಜ್–) ಮಹಂತೇಶ್ ರಾಮದುರ್ಗ (ಅಗಸಿ ಪಾರ್ಲರ್) ಮೋಹನ್ ಎನ್ (ಸಚಿನ್... ತೆಂಡುಲ್ಕರ್ ಅಲ್ಲ) ಅವರ ಜೊತೆ ಮಾತುಕತೆ | 9–12–2014 ಮಂಗಳವಾರ ಮಧ್ಯಾಹ್ನ 12–00 ಗಂಟೆಗೆ | ವಾರ್ತಾಸೌಧ, ಸಭಾಂಗಣ, ನೆಲಮಹಡಿ ಭಗವಾನ್ ಮಹಾವೀರ ರಸ್ತೆ ಬೆಂಗಳೂರು |
| 2 | 7ನೇ ಬೆಂಗಳೂರು ಅಂತರಾಷ್ಟ್ರೀಯ ಸಿನಿಮೋತ್ಸವದ ಅಂಗವಾಗಿ ಜನವಾದಿ ಮಹಿಳಾ ಸಂಘಟನೆಯ ವತಿಯಿಂದ "ಮಹಿಳಾ ದೌರ್ಜನ್ಯ" ಕುರಿತು ವಿಚಾರ ಸಂಕಿರಣ. | 9–12–2014 ಮಂಗಳವಾರ ಮಧ್ಯಾಹ್ನ 3–00 ಗಂಟೆಗೆ | ಚಾಮುಂಡೇಶ್ವರಿ ಸ್ಟುಡಿಯೋ, ಮಿಲ್ಲರ್ಸ್ ಟ್ಯಾಂಕ್ ಬಂಡ್ ರಸ್ತೆ, ಬೆಂಗಳೂರು – |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

ಬೆಂಗಳೂರು, ಡಿಸೆಂಬರ್ 8 (ಕರ್ನಾಟಕ ವಾರ್ತೆ)

## ಈರುಳ್ಳಿ ಬೆಳೆ ನಷ್ಟ : ನಾಲ್ಕು ಜಿಲ್ಲೆಗಳಿಗೆ 23.50 ಕೋಟಿ ರೂ ಸಹಾಯಧನ ಅನುದಾನ ಬಿಡುಗಡೆ

**ಬೆಂಗಳೂರು, ಡಿಸೆಂಬರ್ 8 (ಕರ್ನಾಟಕ ವಾರ್ತೆ)**

ಅಕ್ಟೋಬರ್ ಮಾಹೆಯವರೆಗೆ ಬಿದ್ದ ಅಕಾಲಿಕ ಹೆಚ್ಚುವರಿ ಮಳೆಯಿಂದಾಗಿ ಈರುಳ್ಳಿ ಬೆಳೆ ನಾಶವಾಗಿರುವ ಹಿನ್ನೆಲೆಯಲ್ಲಿ ಈರುಳ್ಳಿ ಬೆಳೆ ನಾಶವಾಗಿರುವ ಧಾರವಾಡ, ಗದಗ, ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳಿಗೆ ಪ್ರಾರಂಭಿಕ ಹಂತವಾಗಿ ಹೆಚ್ಚುವರಿ ಇನ್‌ಪುಟ್ ಸಬ್ಸಿಡಿಯನ್ನು ಎಸ್.ಡಿ.ಆರ್.ಎಫ್. ಮಾರ್ಗಸೂಚಿ ದರಕ್ಕಿಂತ ಹೆಚ್ಚುವರಿಯಾಗಿ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಜಿಲ್ಲಾಧಿಕಾರಿಗಳಿಗೆ ಒಟ್ಟು 23.50 ಕೋಟಿ ರೂ. ಅನುದಾನ ಬಿಡುಗಡೆಮಾಡಲು ರಾಜ್ಯ ಸರ್ಕಾರ ಮಂಜೂರಾತಿ ನೀಡಿದೆ.

ಧಾರವಾಡ ಜಿಲ್ಲೆಯಲ್ಲಿ 13978 ಹೆಕ್ಟೇರ್‌ಗಳಲ್ಲಿ ಈರುಳ್ಳಿ ಬೆಳೆ ನಷ್ಟವಾಗಿದ್ದು, 10 ಕೋಟಿ ರೂ. ಅನುದಾನ ಬಿಡುಗಡೆಮಾಡಲಾಗಿದೆ. ಗದಗ ಜಿಲ್ಲೆಯಲ್ಲಿ 14500 ಹೆಕ್ಟೇರ್ ಪ್ರದೇಶಗಳಲ್ಲಿ ಈರುಳ್ಳಿ ಬೆಳೆ ನಾಶವಾಗಿದ್ದು 10 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಧಾರವಾಡ ಜಿಲ್ಲೆ 980 ಹೆಕ್ಟೇರ್ ಹಾಗೂ ಚಿತ್ರದುರ್ಗ ಜಿಲ್ಲೆಯ 3600 ಹೆಕ್ಟೇರ್‌ಗಳಲ್ಲಿ ಬೆಳೆ ನಷ್ಟವಾಗಿದೆ. ಕ್ರಮವಾಗಿ ಒಂದು ಕೋಟಿ ಹಾಗೂ 2.50 ಕೋಟಿ ರೂ. ಗಳ ಅನುದಾನ ಬಿಡುಗಡೆಮಾಡಲಾಗಿದೆ. ಉಳಿದ ಮೊತ್ತವನ್ನು ಜಂಟಿ ಸಮೀಕ್ಷೆ ವರದಿ ಬಂದ ನಂತರ ಬಿಡುಗಡೆ ಮಾಡಲಾಗುವುದು ಎಂದು ಸರ್ಕಾರ ತನ್ನ ಆದೇಶದಲ್ಲಿ ತಿಳಿಸಿದೆ.

**ಸಮ:ಬಾಬು:ಜಿಪಿಆರ್**

## ಜಾನಪದ ಅಧ್ಯಯನ, ಜನಪದ ಕಲೆಗಳ ಕಲಿಕಾ ಕೇಂದ್ರ ಆರಂಭಕ್ಕೆ ಆಡಳಿತಾತ್ಮಕ ಅನುಮೋದನೆ

**ಬೆಂಗಳೂರು, ಡಿಸೆಂಬರ್ 8 (ಕರ್ನಾಟಕ ವಾರ್ತೆ)**

ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲ್ಲೂಕಿನಲ್ಲಿ ಜಾನಪದ ಅಧ್ಯಯನ ಮತ್ತು ಜನಪದ ಕಲೆಗಳ ಕಲಿಕಾ ಕೇಂದ್ರವನ್ನು ಪ್ರಾರಂಭಿಸಲು ರಾಜ್ಯ ಸರ್ಕಾರವು ಷರತ್ತಿಗೊಳ್ಳಪಟ್ಟ ತಾತ್ವಿಕ ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶ ಹೊರಡಿಸಿದೆ.

**ಸಮ:ಬಾಬು:ಜಿಪಿಆರ್.**

## ಇಲಾಖಾ ಪರೀಕ್ಷೆ : ಪ್ರವೇಶ ಪತ್ರ ಇಲಾಖಾ ವೆಬ್‌ಸೈಟ್‌ನಲ್ಲಿ ಪಡೆದುಕೊಳ್ಳಲು ಸೂಚನೆ

**ಬೆಂಗಳೂರು, ಡಿಸೆಂಬರ್ 8 (ಕರ್ನಾಟಕ ವಾರ್ತೆ)**

ಕರ್ನಾಟಕ ಲೋಕಸೇವಾ ಆಯೋಗವು 2014 ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳನ್ನು ಈ ಕೆಳಕಂಡ ದಿನಾಂಕಗಳಂದು ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ನಡೆಸಲಿದೆ.

ದಿನಾಂಕ: 13–12–2014 ರಿಂದ 12–12–2014 ರವರೆಗೆ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳು ಮತ್ತು ನವದೆಹಲಿ ಕೇಂದ್ರ.

ದಿನಾಂಕ: 17–12–2014 ರಿಂದ 26–12–2014 ರವರೆಗೆ, ಬೆಂಗಳೂರು, ಬೆಳಗಾಂ, ಬಿಜಾಪುರ, ಗದಗ, ಗುಲ್ಬರ್ಗಾ,ಮಂಗಳೂರು, ಮೈಸೂರು, ರಾಯಚೂರು, ಶಿವಮೊಗ್ಗ ಕೇಂದ್ರಗಳು ಹಾಗೂ ನವದೆಹಲಿ ಕೇಂದ್ರ.

ದಿನಾಂಕ 29–12–2014 ರಿಂದ 03–01–2014 ರವರೆಗೆ ಬೆಂಗಳೂರು ಕೇಂದ್ರ.

ಈ ಪರೀಕ್ಷೆಗಳಿಗೆ ಈಗಾಗಲೇ ಅರ್ಜಿ ಸಲ್ಲಿಸಿರುವ ಅರ್ಹ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು ಮತ್ತು ಅನರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಆಯೋಗದ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿರುತ್ತದೆ. ಅಭ್ಯರ್ಥಿಗಳು ದಿನಾಂಕ 07–12–2014 ರಿಂದ ಆಯೋಗದ ವೆಬ್‌ಸೈಟ್ http://kpsc.kar.nic.in ನ Home page ನಲ್ಲಿ "CLICK HERE TO DOWNLOAD ADMISSION TICKET FOR DEPARTMENTAL EXAMINATION 2014 – II – SESSION" ಎನ್ನುವ LINK ಅನ್ನು ಕ್ಲಿಕ್ ಆಡಿ ತಮ್ಮ ಅರ್ಜಿ ಸಂಖ್ಯೆಗಳನ್ನು ನಮೂದಿಸಿ ಪ್ರವೇಶ ಪತ್ರಗಳನ್ನು ಹಾಗೂ ಅಭ್ಯರ್ಥಿಗಳಿಗೆ ಸೂಚನೆಗಳ ಪ್ರತಿಯನ್ನು "ಡೌನ್‌ಲೋಡ್" ಮಾಡಿಕೊಳ್ಳಬಹುದು. ಪ್ರವೇಶ ಪತ್ರವನ್ನು ಡೌನ್‌ಲೋಡ್ ಮಾಡಿಕೊಳ್ಳುವ ಸಂದರ್ಭದಲ್ಲಿ ಸಮಸ್ಯೆ ಉದ್ಭವವಾದಲ್ಲಿ ಸಹಾಯವಾಣಿ ಸಂಖ್ಯೆ : 9901294490/9632320751 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಪ್ರಕಟಣೆ ತಿಳಿಸಿದೆ.

ಸಮ:ಜಿಪಿಆರ್